## ಅಸಮರ್ಪಕ ನಿರ್ಧಾರದಿಂದ ಸೋಲು

‘ಟೆಸ್ಟ್‌ನಲ್ಲಿ ಫೇಲಾದ ಐಪಿಎಲ್ ವೀರರು’ (ಜೂನ್ 29, ಪ್ರಮೋದ) ಲೇಖನ ವಿಮರ್ಶಾತ್ಮಕವಾಗಿದೆ. ಖೇಲೋ ಇಂಡಿಯಾ ಯೋಜನೆ ಬಳಿಕ ಹಲವು ಕ್ರೀಡೆಗಳಲ್ಲಿ ನಮ್ಮ ಸಾಧನೆ ಉತ್ತಮಗೊಂಡರೂ ಕ್ರಿಕೆಟ್‌ನಲ್ಲಿ ಕಳೆದ ಕೆಲ ವರ್ಷಗಳಲ್ಲಿ ಅಸ್ಥಿರ ಪ್ರದರ್ಶನ ತೋರಿಸುವುದಕ್ಕೆ ಬಿಸಿಸಿಐನ ಅಸಮರ್ಪಕ ನಿರ್ಧಾರಗಳೇ ಕಾರಣ. ದೇಸಿ ರಣಜಿ, ಇರಾನಿ ಟ್ರೋಫಿ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿದವರನ್ನು ಟೆಸ್ಟ್ ತಂಡಕ್ಕೂ, ದೇವಧರ ಟ್ರೋಫಿಯಲ್ಲಿ ಮಿಂಚಿದವರನ್ನು ಏಕದಿನ ಪಂದ್ಯಗಳ ರಾಷ್ಟ್ರೀಯ ತಂಡಕ್ಕೂ ಆರಿಸಿ ನಿರಂತರ ತರಬೇತಿ ನೀಡಬೇಕು. ಹಾಗೆಯೇ ಐಪಿಎಲ್ ಪಂದ್ಯಗಳಲ್ಲಿ ಯಶಸ್ಸು ಪಡೆದವರನ್ನು ಟಿ– 20 ತಂಡಕ್ಕೆ ಸೇರಿಸಿಕೊಳ್ಳಬೇಕು.

ಮೂರು ನಾಲ್ಕು ಪಂದ್ಯಗಳಲ್ಲಿ ನಿರಂತರ ಸೋತರೆ ಅವರನ್ನು ಕೈ ಬಿಡಬೇಕು. ತಂಡಕ್ಕೆ ಯಾವೊಬ್ಬ ಆಟಗಾರನೂ ಅನಿವಾರ್ಯವಲ್ಲ.

–ಬಿ.ಎನ್. ಭರತ್, ಬೆಂಗಳೂರು

## ಸಾಮರ್ಥ್ಯದ ಸಮರ್ಥ ಬಳಕೆಯಾಗಲಿ

2 ವರ್ಷದ ಹಿಂದೆ ಇಂಗ್ಲೆಂಡ್ ತಂಡ ಭಾರತದಲ್ಲಿ ಆಡಿದ ಮೊದಲ ಟೆಸ್ಟ್‌ನಲ್ಲಿ 600+ ರನ್ ಗಳಿಸಿ 200+ ಅಂತರದಿಂದ ಗೆದ್ದಿತ್ತು. ಮುಂದಿನ ಮೂರು ಪಂದ್ಯಗಳಲ್ಲಿ ಒಟ್ಟಿಗೆ 600 ರನ್ ಗಳಿಸಲಿಲ್ಲ. ಕಾರಣ ಸ್ಪಿನ್ ಪಿಚ್. ಭಾರತ ಉತ್ತಮ ತಂಡ. ಅವರು ತಮ್ಮ ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿಕೊಂಡು ಗೆಲ್ಲಬೇಕೆಂಬುದೇ ನಮ್ಮ ಆಶಯ.

–ಬಸವರಾಜ ಹರಿಹರ, ಧಾರವಾಡ



## ಸಂಗ್ರಹಯೋಗ್ಯ ಬರಹ

‘ಚಂದ್ರಯಾನ 3; ಮರಳಿ ಚಂದ್ರನತ್ತ ಭಾರತದ ಚಿತ್ತ’ (ಜೂನ್ 29, ಡಾ. ಬಿ. ಆರ್. ಗುರುಪ್ರಸಾದ್) ಲೇಖನ ಮಾಹಿತಿಪೂರ್ಣವಾಗಿದೆ. ಭಾರತ ಮೊದಲ್ಗೊಂಡು, ಪ್ರಪಂಚದ ವಿವಿಧ ಭಾಗಗಳಲ್ಲಿ ನಡೆದ ಚಂದ್ರನ ಅನ್ವೇಷಣೆಯ ಇತಿಹಾಸವನ್ನು, ಆ ಕ್ಷೇತ್ರದಲ್ಲಿಯ ನಿರಂತರ ಪ್ರಗತಿಯನ್ನು, ಪ್ರಚಲಿತ ವಿದ್ಯಮಾನಗಳನ್ನು ಹಾಗೂ ಮುಂಬರುವ ಅಭಿವೃದ್ಧಿ ಕಾರ್ಯಗಳನ್ನು ಅತ್ಯಂತ ಕಾಳಜಿ ಪೂರ್ವಕವಾಗಿ (ಸೂಕ್ಷ್ಮವಾಗಿ) ಸಂಗ್ರಹಿಸಿ, ಓದುಗರಿಗೆ ತಲುಪಿಸಿದ ಲೇಖಕರಿಗೆ ಅಭಿನಂದನೆಗಳು.

–ಸಂಜೀವ ಸಿ. ಗೌರ, ವಿಜ್ಞಾನಿ, ಇಸ್ರೋ, ಹಾಸನ

## ಪ್ರಶಂಸಾರ್ಹ ಲೇಖನ

‘ಉಚಿತದ ಔಚಿತ್ಯ’ (ಜೂನ್ 29, ಚಂಪಕಮಾಲಾ) ವಿಚಾರ ಲಹರಿಯಲ್ಲಿ ಸರ್ಕಾರ ಮಹಿಳೆಯರಿಗೆ ನೀಡಿರುವ ಸೌಲಭ್ಯವನ್ನು ಸಕಾರಾತ್ಮಕವಾಗಿ ನೋಡಿರುವುದು ಸಂತಸ ತಂದಿತು. ಆದರೆ ಅವರ ಅಭಿಪ್ರಾಯದಂತೆ ಗಂಡು ಹೆಣ್ಣಿನ ನೆರಳಿನಿಂದ ಹೊರಬಂದು ಸ್ವಾವಲಂಬಿಯಾಗುತ್ತಾನೋ ಇಲ್ಲವೋ ಕಾದುನೋಡಬೇಕು.

–ಸತ್ಯವತಿ, ಕುಳಿಹಿತ್ಲು

## ಕಣ್ಣು ತೆರೆಸಿದ ಕಥೆ

‘ಜೊತೆ ಜೊತೆಯಲಿ’ (ಜೂನ್ 29, ಸಿ.ಎನ್. ಮುಕ್ತಾ) ಕಥೆ ಓದಿದ ಮೇಲೆ ನನಗೂ ನಾ ಮಾಡಿದ ತಪ್ಪುಗಳ ಅರಿವಾಯಿತು. ಮುಂದೆ ಬದುಕನ್ನು ಹೊಂದಿಕೊಂಡು ನಡೆಯುವ ಬಗ್ಗೆ ಕಥೆ ಅರಿವು ಮೂಡಿಸಿತು.

–ಜಬಿವುಲ್ಲಾ

## ನಮ್ಮ ಕಥೆ

ಕಥೆ ಮನಸ್ಸಿಗೆ ತುಂಬಾ ಹತ್ತಿರ ಆಯ್ತು. ಕಥೆಯ ರೀತಿಯೇ ನಮ್ಮ ಬದುಕು ಕೂಡ. ನಾನು, ನನ್ನ ಅಕ್ಕ ಇಬ್ಬರೂ ಬೆಂಗಳೂರಿನಲ್ಲಿ ಇದ್ದೇವೆ. ಅಪ್ಪ ಅಮ್ಮ ಇಬ್ಬರೂ ಊರಿನಲ್ಲಿದ್ದಾರೆ. ತೋಟ, ಮನೆ ಬಿಟ್ಟು ಅವರು ಎಲ್ಲೂ ಬರಲ್ಲ. ನಾನೂ ಕರೆದು ಸಾಕಾಯ್ತು. ಆದರೆ ಅವರಿಬ್ಬರು ತುಂಬಾ ಚೆನ್ನಾಗಿದ್ದಾರೆ. ಅದೇ ನಮಗೆ ಸಂತೋಷ.

–ನಂದೀಶ ಎಚ್.ಎಲ್.




## ಮನ ಪರಿವರ್ತನೆಯಾದೀತು

ಕಥೆಯಲ್ಲಿ ಸ್ನೇಹಿತರ ಪಾತ್ರ ತುಂಬಾ ಚೆನ್ನಾಗಿದೆ. ಇಂತಹ ಕಥೆಯನ್ನು ಧಾರಾವಾಹಿ ಮಾಡಿದರೆ ತುಂಬಾ ಜನರ ಮನಸ್ಸು ಪರಿವರ್ತನೆ ಆಗಬಹುದಲ್ಲವೆ..? ಸಂಸಾರದಲ್ಲಿ ನೆಮ್ಮದಿ ಮೂಡಬಹುದು.

–ಹೇಮಾ ದೇಶಪಾಂಡೆ

## ಸಾಂತ್ವನದ ಹಂಬಲ

ಜೊತೆಜೊತೆಯಲಿ, ತಂದೆ ಮಕ್ಕಳ ಎಂದಿನ ಬೇಕು ಬೇಡಗಳ ಕಥೆಯಾದರೂ ಮಕ್ಕಳ ನಿರ್ಲಕ್ಷ್ಯದಿಂದ ಬೇಸತ್ತ ನೊಂದ ವೃದ್ಧ ದಂಪತಿಗೆ ಧೈರ್ಯ ತುಂಬುವ, ಸಾಂತ್ವನ ಹೇಳುವ ಹಂಬಲ ಇದರಲ್ಲಿದೆ. ಆರೋಗ್ಯ ಕಾಪಾಡಿಕೊಂಡು ಸುಂದರವಾಗಿ ಬದುಕುವ ಛಲ ಮೂಡಿಸುವ ಕಥೆ ಇದಾಗಿದೆ.

–ವಿಜಯ್ ಮಂಜುನಾಥ್

## ಹೊಂದಾಣಿಕೆಯ ಖುಷಿ

ವೃದ್ಧಾಪ್ಯದಲ್ಲಿ ದಂಪತಿ ಹೊಂದಾಣಿಕೆಯಿಂದ ಬಾಳಿದರೆ ಜೀವನ ಸಂತೋಷಕರವಾಗಿರುತ್ತದೆ ಎಂಬುದನ್ನು ಕಥೆ ಮಾರ್ಮಿಕವಾಗಿ ಹೇಳಿದೆ.

–ಎಂ.ಎಸ್. ರಾಮಚಂದ್ರರಾವ್, ಮೈಸೂರು

## ಚಡಗ ಕಾದಂಬರಿ ಪ್ರಶಸ್ತಿಗೆ ಆಹ್ವಾನ

ಕೋಟೇಶ್ವರದ ಎಸ್.ಆರ್.ಎ.ಎಂ.ಎಚ್ ಪ್ರಕಾಶನವು, ಸ್ಥಿತಿಗತಿ ತ್ರೈಮಾಸಿಕ ಪತ್ರಿಕೆ ಆಶ್ರಯದಲ್ಲಿ, ಕನ್ನಡದ ಕಾದಂಬರಿಕಾರ ದಿ. ಪಾಂಡೇಶ್ವರ ಸೂರ್ಯನಾರಾಯಣ ಚಡಗರ ಸ್ಮರಣಾರ್ಥ ನೀಡುವ ಕಾದಂಬರಿ ಪ್ರಶಸ್ತಿಗೆ, 2022ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟವಾದ ಕಾದಂಬರಿಗಳನ್ನು ಆಹ್ವಾನಿಸಿದೆ.

ಆಸಕ್ತರು ಕೃತಿಯ ಮೂರು ಪ್ರತಿಗಳನ್ನು ಪ್ರೊ. ಉಪೇಂದ್ರ ಸೋಮಯಾಜಿ, ‘ಶ್ರೀ’ ಚಿತ್ರಪಾಡಿ, ಸಾಲಿಗ್ರಾಮ, ಉಡುಪಿ– 575225 ವಿಳಾಸಕ್ಕೆ ಆಗಸ್ಟ್ 30ರೊಳಗೆ ಕಳುಹಿಸಿ. ಪ್ರಶಸ್ತಿಪತ್ರ, ಸ್ಮರಣಿಕೆ, ಹತ್ತು ಸಾವಿರ ರೂಪಾಯಿಗಳನ್ನು ಪ್ರಶಸ್ತಿ ಒಳಗೊಂಡಿದೆ. ಮಾಹಿತಿಗೆ : 9740842722.

## ವಿಭಾ ಸಾಹಿತ್ಯ ಪ್ರಶಸ್ತಿಗೆ ಆಹ್ವಾನ

ಕನ್ನಡ ಕವಯಿತ್ರಿ ವಿಭಾ ಅವರ ನೆನಪಿನಲ್ಲಿ ‘ವಿಭಾ ಸಾಹಿತ್ಯ ಪ್ರಶಸ್ತಿ 2023’ಕ್ಕಾಗಿ ಸ್ವರಚಿತ ಕವಿತೆಗಳ ಹಸ್ತಪ್ರತಿಗಳನ್ನು ಆಹ್ವಾನಿಸಲಾಗಿದೆ. ಅನುವಾದಿತ ಕವಿತೆ, ಚುಟುಕು, ಹನಿಗವನಗಳಿಗೆ ಅವಕಾಶವಿಲ್ಲ. ಹತ್ತು ಸಾವಿರ ನಗದು ಮತ್ತು ಪ್ರಶಸ್ತಿ ಫಲಕವನ್ನು ಪ್ರಶಸ್ತಿ ಒಳಗೊಂಡಿದೆ. ಹಸ್ತಪ್ರತಿಯನ್ನು ಹಿಂದಿರುಗಿಸಲಾಗುವುದಿಲ್ಲ. ಡಿಟಿಪಿ ಅಥವಾ ಬರವಣಿಗೆಯ ಹಸ್ತಪ್ರತಿ ಕಳಿಸಿಕೊಡಬೇಕು. ಹಸ್ತಪ್ರತಿ ತಲುಪಲು ಜುಲೈ 10 ಕೊನೇ ದಿನಾಂಕ.

ವಿಳಾಸ: ಸುನಂದಾ ಪ್ರಕಾಶ ಕಡಮೆ, ಸಂಚಾಲಕರು, ವಿಭಾ ಸಾಹಿತ್ಯ ಪ್ರಶಸ್ತಿ 2023 ನಂ.90, ‘ನಾಗಸುಧೆ ಜಗಲಿ’, 6/ಬಿ ಕ್ರಾಸ್, ಕಾಳಿದಾಸನಗರ, ವಿದ್ಯಾನಗರ ಎಕ್ಸ್‌ಟೆನ್ಷನ್, ಹುಬ್ಬಳ್ಳಿ– 580031. ದೂ; 9845779387.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in